ದಿನಾಂಕಃ 26-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಎಂ ಟಿ ಎಸ್ ವಕೀಲರಿಂದ**

1. ಬಸವರಾಜಪ್ಪ ನನ್ನ ತಂದೆ. ನನ್ನ ತಂದೆ 15-03-2007ರಂದು ಮೃತಪಟ್ಟಿರುತ್ತಾರೆ. ನಮ್ಮ ಕುಟುಂಬದ ಯಜಮಾನಿಕೆಯನ್ನು ನನ್ನ ತಂದೆ ಮೃತಪಡುವವರೆಗೂ ಅವರೇ ನಿರ್ವಹಿಸುತ್ತಿದ್ದರು ಎಂದರೆ ಸರಿ. ನನ್ನ ತಂದೆ ನಮ್ಮ ಗ್ರಾಮದಲ್ಲಿ ಮಾರ್ಯಾದಸ್ಥ ಕುಂಟುಂಬಕ್ಕೆ ಸೇರದವರು ಮತ್ತು ಗೌರವಾನ್ವಿತ ವ್ಯಕ್ತಿ ಎಂದರೆ ಸರಿ. ನನ್ನ ತಂದೆಗೆ ಯಾವುದೇ ದುಶ್ಚಟಗಳು ಇರಲಿಲ್ಲ ಎಂದರೆ ಸರಿ. ಹಾಗಾಗಿ ನನ್ನ ತಂದೆ ಯಾವುದೇ ವ್ಯವಹಾರವನ್ನು ಮಾಡಿದರೂ ಸಹ ನಮ್ಮ ಕುಟುಂಬದ ಅಭಿವೃದ್ದಿ ಮತ್ತು ಒಳಿತಿಗಾಗಿಯೇ ಮಾಡುತ್ತಿದ್ದರು ಎಂದರೆ ಇರಬಹುದು. ನನ್ನ ತಂದೆ ಮೃತಪಟ್ಟ ನಂತರ ನಮ್ಮ ಒಟ್ಟು ಕುಟುಂಬದ ವ್ಯವಹಾರವನ್ನು ನನ್ನ ತಾಯಿಯಾದ 1 ನೇ ಪ್ರತಿವಾದಿ ನೋಡಿಕೊಂಡು ಬರುತ್ತಿದ್ದರು ಎಂದರೆ ಸರಿ. ದಾವಾಸ್ತಿಗಳು ನನ್ನ ತಂದೆಗೆ ದಾವಾಸ್ತಿಗಳು ಅವರ ತಂದೆಯಿಂದ ಬಂದವು ಎನ್ನುವುದನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

2. ನನ್ನ ತಂದೆಯ ತಂದೆಯ ಹೆಸರು ನಿಂಗಪ್ಪ (ಅಜ್ಜ). ನನ್ನ ಅಜ್ಜನಿಗೆ 6 ಜನ ಹೆಣ್ಣುಮಕ್ಕಳು ಮತ್ತು ನನ್ನ ತಂದೆ ಒಬ್ಬ ಗಂಡು ಮಗ. ನನ್ನ ಅಜ್ಜ ನಾನು ಹುಟ್ಟುವ ಪೂರ್ವವೇ ಮೃತಪಟ್ಟಿರುತ್ತಾರೆ.

3. 1ನೇ ದಾವಾಸ್ತಿ ಈ ದಾವೆ ಹೂಡುವ ಪೂರ್ವಕ್ಕೆ ನನ್ನ ತಾಯಿಯ ಹೆಸರಿನಲ್ಲಿತ್ತು. ನಾನು ಹಾಜರುಪಡಿಸಿರುವ ನಿಪಿ-1 ರಂತೆ 1 ನೇ ದಾವಾಸ್ತಿಯ ಖಾತೆ ಈ ದಾವೆ ಹೂಡುವ ಸಮಯಕ್ಕೆ 3 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯ 3 ರಿಂದ 8 ನೇ ಪ್ರತಿವಾದಿಗಳು ನಮ್ಮ ಕುಟುಂಬಕ್ಕೆ ಸೇರಿದ ಸದಸ್ಯರು ಅಲ್ಲ ಎಂದರೆ ಸರಿ. ಹಾಗಿದ್ದರೆ ಸದರಿ 3 ರಿಂದ 8 ನೇ ಪ್ರತಿವಾದಿಗಳನ್ನು ಈ ದಾವೆಗೆ ಏಕೆ ಪಕ್ಷಗಾರರಾಗಿ ಸೇರಿಸಿದ್ದೀರಿ ಎಂದರೆ ಸಾಕ್ಷಿ ದಾವಾಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾದ ಕಾರಣ ಅವುಗಳಲ್ಲಿ ನಮಗೆ ಪಾಲು ಬೇಕು ಎಂದು ಕೇಳಿದ್ದು ಅದಕ್ಕಾಗಿ ನಾವು ಸದರಿ ದಾವಾಸ್ತಿಗಳ ಪಹಣಿ ದಾಖಲೆಗಳನ್ನು ತೆಗೆಸಿದಾಗ ಸದರಿಯವರ ಹೆಸರುಗಳು ನಮೂದಾದ ಕಾರಣ ಸದರಿಯವರನ್ನು ಈ ದಾವೆಗೆ ಪಕ್ಷಗಾರರಾಗಿ ಮಾಡಿರುತ್ತೇವೆ.

3 ರಿಂದ 8 ನೇ ಪ್ರತಿವಾದಿಗಳನ್ನು ಈ ದಾವೆಗೆ ಏಕೆ ಪಕ್ಷಗಾರಾಗಿ ಮಾಡಿದ್ದೇವೆ ಎಂದು ನಮ್ಮ ವಕೀಲರಿಗೆ ತಿಳಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

4. ನನ್ನ ದಾವೆಯಲ್ಲಿ ದಿಃ 13-09-2001ರಲ್ಲಿ 3ನೇ ಪ್ರತಿವಾದಿಯ ಹೆಸರಿಗೆ 1ನೇ ದಾವಾಸ್ತಿ ನೊಂದಾಯಿತ ಕ್ರಯಪತ್ರವಾಗಿರುವ ಕುರಿತು ನಮೂದಿಸಿದ್ದೆನೆ ಎಂದರೆ ನನಗೆ ಗೊತ್ತಿಲ್ಲ. 2ನೇ ದಾವಾಸ್ತಿ ಈ ದಾವೆ ಹೂಡುವ ಸಮಯಕ್ಕೆ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಮೃತಪಟ್ಟ ನಂತರ ದಾವಾಸ್ತಿಯ ಖಾತೆ ನನ್ನ ತಾಯಿಯ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ.

5. 2ನೇ ದಾವಾಸ್ತಿ ಈ ದಾವೆ ಹೂಡುವ ಸಮಯಕ್ಕೆ ನಿಪಿ-2 ರಂತೆ 4 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ 2 ನೇ ದಾವಾ ಆಸ್ತಿ ಯಾವ ಆಧಾರದ ಮೇಲೆ 4 ನೇ ಪ್ರತಿವಾದಿಯ ಹೆಸರಿಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ದಾವೆಯಲ್ಲಿ ನನ್ನ ತಂದೆ ಮೃತಪಟ್ಟ ತರುವಾಯ ನನ್ನ ತಾಯಿ 2 ನೇ ದಾವಾಸ್ತಿಯನ್ನ 4 ನೇ ಪ್ರತಿವಾದಿಗೆ ದಿಃ 15-10-2007 ರಂದು ನೊಂದಾಯಿತ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

6. 3ನೇ ದಾವಾಸ್ತಿ ಹೂಡುವ ಸಮಯಕ್ಕೆ ನಿಪಿ-3 ರಂತೆ 5ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಆಸ್ತಿ 5ನೇ ಪ್ರತಿವಾದಿಗೆ ದಿಃ 04-06-2004ರಂದು ನೊಂದಾಯಿತ ಕ್ರಯಪತ್ರದ ಆಧಾರದ ಮೇಲೆ ಬಂದಿರುವ ಕುರಿತು ನಾನು ವಾದಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಿಂದ 3 ರಲ್ಲಿ ನಮೂದಿಸಿರುವ ಖಾತಾದಾರರೇ 1 ರಿಂದ 3 ನೇ ದಾವಾಸ್ತಿಗಳಲ್ಲಿ ಸ್ವಾಧೀನಾನುಭವ ಹೊಂದಿ ಪ್ರಸ್ತುತ ಅನುಭವಿಸುತ್ತಿದ್ದಾರೆ ಎಂದರೆ ಸರಿ.

7. 4ನೇ ದಾವಾಸ್ತಿ ಹೂಡುವ ಸಮಯಕ್ಕೆ ನಿಪಿ-4ರಂತೆ 4ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಆಸ್ತಿ 4ನೇ ಪ್ರತಿವಾದಿಗೆ ನೊಂದಾಯಿತ ಕ್ರಯಪತ್ರದ ಆಧಾರದ ಮೇಲೆ ಬಂದಂತಹ ಆಸ್ತಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

8. ಅದೇ ರೀತಿ 5 ನೇ ದಾವಾಸ್ತಿ ಹೂಡುವ ಸಮಯಕ್ಕೆ ನಿಪಿ-5 ರಂತೆ 6ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಹಾಗಾಗಿ 1 ರಿಂದ 5 ನೇ ದಾವಾಸ್ತಿಗಳಲ್ಲಿ ನಿಪಿ-1 ರಿಂದ 5 ರಲ್ಲಿ ನಮೂದು ಇರುವ ಖಾತೆದಾರರೇ ಸಾಧೀನಾನುಭವದಲ್ಲಿದ್ದು ಸಾಗು ಮಾಡುತ್ತಿದ್ದಾರೆ ಎಂದರೇ ಸರಿ.

9. ಹಾಗಾಗಿ ನಮ್ಮ ಕುಟುಂಬಕ್ಕೆ ಸರ್ವೆ ನಂ 62/7ರಲ್ಲಿನ 3 ಎಕರೆ 25 ಗುಂಟೆಯಾದ 6 ನೇ ದಾವಾಸ್ತಿ ಮಾತ್ರ ಉಳಿದಿದೆ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ತರುವಾಯ ನನ್ನ ತಾಯಿ ಯಾವುದೇ ದುರ್ ವ್ಯವಹಾರ ಮಾಡಿಲ್ಲ ಎಂದರೆ ಸರಿ. ಹಾಗಾಗಿ ನನ್ನ ತಾಯಿಯ ಸಹ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿ ಎಂದರೆ ಸರಿ. ಹಾಗಾಗಿ ನನ್ನ ತಾಯಿಯಾವುದೇ ವ್ಯವಹಾರವನ್ನು ಮಾಡಿದ್ದರು ಸಹ ನಮ್ಮ ಕುಟುಂಬದ ಒಳಿತಿಗಾಗಿಯೇ ಮಾಡಿರುತ್ತಾರೆ ಎಂದರೆ ಸರಿ. ಹಾಗಾಗಿ ನನ್ನ ತಂದೆ ಮತ್ತು ತಾಯಿ ಮಾಡಿರುವ ವ್ಯವಹಾರಗಳು ನಮಗೂ ಸಹ ಅನ್ವಯವಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

10. ಈ ದಾವೆ ಹೂಡುವ ಮುನ್ನ ನಾನು 1 ಮತ್ತು 2 ನೇ ಪ್ರತಿವಾದಿಯೊಂದಿಗೆ ಯಾವುದೇ ಮಾತುಕತೆ ನಡೆಸಿರುವುದಿಲ್ಲ. ಈ ದಾವೆಗೆ ನಾನು ಹಾಜರುಪಡಿಸಿರುವ ನಿಪಿ-9 ರಿಂದ 16 ರವರೆಗಿನ ಕ್ರಯಪತ್ರದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಸದರಿ ನಿಪಿ-9 ರಿಂದ 16 ರಲ್ಲಿ ಯಾವ ಉದ್ದೇಶಕ್ಕಾಗಿ 1 ರಿಂದ 5 ನೇ ದಾವಾಸ್ತಿಗಳನ್ನು 3 ರಿಂದ 8 ನೇ ಪ್ರತಿವಾದಿಳಿಗೆ ಮಾರಾಟ ಮಾಡಿರುತ್ತಾರೆ ಎಂಬ ಬಗ್ಗೆ ನಮೂದು ಇದೆ ಎಂದರೆ ಸರಿ. ನಿಪಿ-9 ರಿಂದ 16ರವರೆಗಿನ ದಾಖಲೆಗಳಲ್ಲಿ ನಮೂದು ಇರುವ ನಮ್ಮ ತಾಯಿ ತಂದೆ ದಾವಾಸ್ತಿಗಳನ್ನು ಮಾರಾಟ ಮಾಡಲು ನಮೂದಿಸಿರುವ ಉದ್ದೇಶ ಸತ್ಯವಾಗಿದೆ ಎಂದರೆ ಸರಿಯಲ್ಲ. 1 ರಿಂದ 5 ನೇ ದಾವಾಸ್ತಿಗಳನ್ನು ನನ್ನ ತಾಯಿ ತಂದೆ ನಮ್ಮ ಕುಟುಂಬದ ಅಭಿವೃದ್ಧಿ ಹಾಗೂ ಒಳಿತಿಗಾಗಿಯೇ ಮಾರಾಟ ಮಾಡಿರುವ ಕಾರಣ ಸದರಿ ಕ್ರಯದ ವ್ಯವಹಾರಗಳು ನಮ್ಮ ಮೇಲೂ ಸಹ ಕಾನೂನಾತ್ಮಕವಾಗಿ ಬಾದ್ಯಸ್ಥವಾಗುತ್ತವೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಸದರಿ 1 ರಿಂದ 5 ನೇ ದಾವಾಸ್ತಿಗಳನ್ನು ಮಾರಾಟ ಮಾಡಿರುವ ವಿಚಾರ ನಮಗೆ ಮಾರಾಟ ಮಾಡಿದ ದಿನಾಂಕಗಳಿಂದಲೇ ಗೊತ್ತು ಎಂದರೆ ನನಗೆ ಗೊತ್ತಿಲ್ಲ.

11. ನಾನು ಈಗಲೂ ಸಹ 1 ಮತ್ತು 2 ನೇ ಪ್ರತಿವಾದಿಯೊಂದಿಗೆ ಸೌಹಾರ್ದ ಸಂಬಂಧ ಹೊಂದಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿಯೇ 1 ಮತ್ತು 2 ನೇ ಪ್ರತಿವಾದಿಗಳು ಈ ದಾವೆಗೆ ತಮ್ಮ

ಪರವಾಗಿ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಹಾಗಾಗಿ ಸದರಿ ದಾವೆಯನ್ನು ಹೂಡುವ ಪೂರ್ವ ನಾನು ಮತ್ತು ಇತರೆ ವಾದಿಗಳು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಶಾಮೀಲಾಗಿ 3 ರಿಂದ 8 ನೇ ಪ್ರತಿವಾದಿಗಳ ವಿರುದ್ಧ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಹಾಗಾಗಿ 1 ರಿಂದ 5 ನೇ ದಾವಾಸ್ತಿಗಳನ್ನು ನಮ್ಮ ಕುಟುಂಬದ ಅತ್ಯಾವಶ್ಯಕತೆಗಾಗಿ ಮಾರಾಟ ಮಾಡಿರುವ ಕಾರಣ ಸದರಿ ಮಾರಾಟವನ್ನು ನಾವು ಪ್ರಶ್ನಿಸುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

12. 1 ರಿಂದ 6ನೇ ದಾವಾಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೆಳಲಗೆರೆಯಲ್ಲಿ 1 ಆರ್ ಸಿ ಸಿ ಮನೆ ಇದೆ. ಸದರಿ ಮನೆ ಮೂಲತಃ ನನ್ನ ತಂದೆಗೆ ಸೇರಿದ ಪಿತ್ರಾರ್ಜಿತ ಆಸ್ತಿಯಾಗಿದೆ ಎಂದರೆ ಸರಿ. ಸದರಿ ಆಸ್ತಿಯನ್ನು ಹೊರತಪಡಿಸಿ ಒಂದು ಕಣದ ಆಸ್ತಿ ಇದೆ. ಸದರಿ ಮನೆ ಮತ್ತು ಕಣದ ಆಸ್ತಿಯನ್ನು ಈ ದಾವೆಯಲ್ಲಿ ಪಾಲುವಿಭಾಗ ಕೋರಿ ಸೇರಿಸಿಲ್ಲ ಎಂದರೆ ಸರಿ. ಸದರಿ ಮನೆ ಮತ್ತು ಕಣದ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಗಳ ಸ್ವಾಧೀನದಲ್ಲಿವೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿಯೂ ಸಹ ನಮಗೆ ಹಕ್ಕು ಇದೆ ಎಂದರೆ ಸರಿ.

13. ಹಾಗಾಗಿ ನಮಗೆ ಕಾನೂನು ಪ್ರಕಾರ ಬರಬೇಕಾಗಿರುವ ಹಿಸ್ಸೆ 6 ನೇ ದಾವಾಸ್ತಿಯಲ್ಲಿ ಇದೆ ಎಂದರೆ ಸರಿಯಲ್ಲ. ಹಾಗಾಗಿ ಕಾನೂನುಪ್ರಕಾರ ಭಾಗಮಾಡಿಕೊಂಡರೆ 6 ನೇ ದಾವಾಸ್ತಿಯಲ್ಲಿ ನಮಗೆ ಕಡಿಮೆ ಪಾಲು ಬರುವುದೆಂದು ತಿಳಿದು ನಾವು ಈಗಾಗಲೇ ಮಾರಾಟ ಮಾಡಿದ 1 ರಿಂದ 5 ನೇ ದಾವಾಸ್ತಿಗಳನ್ನು ಸೇರಿಸಿ ಈ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ಹಾಗಾಗಿ 1 ರಿಂದ 5ನೇ ದಾವಾಸ್ತಿಗಳಲ್ಲಿ ನಮಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

(1 ಮತ್ತು 2ನೇ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.